

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–06–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಖುತ್‌ಬಗಳಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮತ್ತು ಅವರು ಭಾಗವಹಿಸಿದ ಯುದ್ಧಗಳ ಹಾಗೂ ದಂಡಯಾತ್ರೆಗಳ ಪ್ರಸ್ತಾಪ ನಡೆಯುತ್ತಿತ್ತು. ಹಮ್‌ರಾಉಲ್ ಅಸದ್ ಯುದ್ಧದ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಉಹದ್ ಯುದ್ಧದ ನಂತರ ಖುರೈಶಿಗಳು ಮಕ್ಕಕ್ಕೆ ಮರಳಿ ಹೋಗುತ್ತಿದ್ದಾಗ ಈ ವಿಜಯದಿಂದ ಪ್ರಯೋಜನ ಪಡೆಯುತ್ತಾ ಮದೀನದ ಮೇಲೆ ಆಕ್ರಮಣ ನಡೆಸುವುದರ ಕುರಿತು ಅವರು ಚರ್ಚೆ ನಡೆಸುತ್ತಿದ್ದರು. ಆವೇಶಭರಿತರಾದ ಜನರ ಪ್ರೇರಣೆ ಮೇರೆಗೆ ಖುರೈಶಿಗಳ ಸೈನ್ಯ ಮದೀನದ ಕಡೆಗೆ ಮರಳಿಹೋಗಲು ತಯಾರಾಯಿತು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ ಅವರು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಸಮಾಲೋಚನೆಗಾಗಿ ಕರೆದರು. ಖುರೈಶಿಗಳ ಸೈನ್ಯವನ್ನು ಹಿಂಬಾಲಿಸಲು ಇಬ್ಬರೂ ಸಲಹೆ ನೀಡಿದರು. "ಉಹದ್ ಯುದ್ಧದಲ್ಲಿ ಭಾಗವಹಿಸಿದ್ದ ಮುಸ್ಲಿಮರು ತಯಾರಾಗಿರಿ" ಎಂದು ಹಝ್ರತ್ ಪೈಗಂಬರ್(ಸ) ತಕ್ಷಣವೇ ಘೋಷಿಸಿದರು. ಹೀಗೆ ಉಹದ್ ಯುದ್ಧದ ಗಾಯಾಳು ಯೋಧರು ಸಂತೋಷದಿಂದ ಹಝ್ರತ್ ಪೈಗಂಬರ್(ಸ)ರ ನೇತೃತ್ವದಲ್ಲಿ ರವಾನೆಯಾದರು. 8 ಮೈಲುಗಳ ದೂರವನ್ನು ದಾಟುತ್ತಾ ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದ್ ತಲುಪಿದರು ಮತ್ತು ಬೇರೆ ಬೇರೆ ಜಾಗಗಳಲ್ಲಿ ಬೆಂಕಿ ಹೊತ್ತಿಸಲು ಆದೇಶಿಸಿದರು. ರಾತ್ರಿಯ ಅಂಧಕಾರದಲ್ಲಿ ಬೆಳಗುತ್ತಿದ್ದ ಐನೂರು ಬೆಂಕಿಯ ಜ್ವಾಲೆಗಳು ದೂರದಿಂದ ನೋಡುವವರ ಹೃದಯಗಳಲ್ಲಿ ಭಯ ಉಂಟುಮಾಡುತ್ತಿತ್ತು. ಇದೇ ಸಂದರ್ಭದಲ್ಲಿ ಖುಝಾಅ ಗೋತ್ರದ ಮಅ್‌ಬದ್ ಎಂಬ ಹೆಸರಿನ ಮುಶ್ರಿಕನಾದ ಸರದಾರ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು ಮತ್ತು ಉಹದ್ ಯುದ್ಧದಲ್ಲಿ ಹುತಾತ್ಮರಾದವರ ಕುರಿತು ಸಂತಾಪ ಸೂಚಿಸಿದರು. ಮರುದಿನ ಅವರು ಅಬೂಸುಫ್‌ಯಾನ್‌ರನ್ನು ಭೇಟಿಯಾಗಿ ಅವರಿಗೆ ಮುಸ್ಲಿಮರ ಉನ್ನತ ಮಟ್ಟದ ಧೈರ್ಯದ ಮತ್ತು ಹುಮ್ಮಸ್ಸಿನ ಬಗ್ಗೆ ತಿಳಿಸಿಕೊಟ್ಟರು. ಮಅ್‌ಬದ್‌ನ ಮಾತುಗಳಿಂದ ಅಬೂಸುಫ್‌ಯಾನ್ ಮತ್ತು ಇತರ ಖುರೈಶಿಗಳು ಎಷ್ಟು ಹೆದರಿದರು ಎಂದರೆ, ಅವರು ಮಕ್ಕಕ್ಕೆ ಮರಳಿ ಹೋಗುವುದೇ ಕ್ಷೇಮವೆಂದು ಭಾವಿಸಿದರು.

ಬನೂ ಮುಸ್ತಲಖ್ ಯುದ್ಧ ಹಿಜರೀ 5ನೇ ವರ್ಷದ ಶಅಬಾನ್ ತಿಂಗಳಲ್ಲಿ ನಡೆಯಿತು. ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಖುರೈಶಿಗಳ ಪಿತೂರಿಯ ಕಾರಣದಿಂದ ಖುಝಾಅ ಗೋತ್ರದ ಶಾಖೆಯಾದ ಬನೂ ಮುಸ್ತಲಖ್ ಮದೀನದ ಮೇಲೆ ಆಕ್ರಮಣ ನಡೆಸಲು ತಯಾರಿ ಶುರುಮಾಡಿದರು. ಈ ವಾರ್ತೆ ಲಭಿಸಿದಾಗ, ಸೈನ್ಯವನ್ನು ತಯಾರುಮಾಡಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸಿದರು. ಹೀಗೆ ಹಲವಾರು ಸಹಾಬರು ಮತ್ತು ದೊಡ್ಡ ಸಂಖ್ಯೆಯಲ್ಲಿ ಕಪಟವಿಶ್ವಾಸಿಗಳು ಸಹ ಹಝ್ರತ್ ಪೈಗಂಬರ್(ಸ)ರೊಡನೆ ಸೇರಿದರು. ಮಾರ್ಗ ಮಧ್ಯೆ ಸತ್ಯನಿಷೇಧಿಗಳ ಒಬ್ಬ ಗುಪ್ತಚರನ ಪತ್ತೆಯಾಯಿತು. ಅವನಿಂದ ಸ್ಥಿತಿಗತಿಗಳ ಬಗ್ಗೆ ಗೊತ್ತುಮಾಡಲು ಪ್ರಯತ್ನಿಸಲಾಯಿತು. ಆದರೆ ಅವನು ಮಾಹಿತಿ ನೀಡಲು ನಿರಾಕರಿಸಿದನು. ಆಗ ಯುದ್ಧದ ಕಾನೂನು ಪ್ರಕಾರ ಹಝ್ರತ್ ಉಮರ್(ರ) ಅವನನ್ನು ಕೊಂದುಹಾಕಿದರು. ಮದೀನದ ಮೇಲೆ ಅಚಾನಕ್ಕಾದ ಹಲ್ಲೆ ನಡೆಸಲು ಬನೂ ಮುಸ್ತಲಖ್ ಉದ್ದೇಶಿಸಿತ್ತು. ಆದರೆ ಅವರಿಗೆ ಮುಸ್ಲಿಮರ ಬರುವಿಕೆಯ ಸುದ್ದಿ ಲಭಿಸಿದಾಗ ಅವರು ಬಹಳವಾಗಿ ಭಯಪಟ್ಟರು. ಆದರೂ ಖುರೈಶಿಗಳು ಬನೂ ಮುಸ್ತಲಖಿನ ಜನರ ಹೃದಯಗಳಲ್ಲಿ ಮುಸ್ಲಿಮರ ಬಗ್ಗೆ ಬಹಳ ತೀವ್ರವಾಗಿ ಹಗೆಯನ್ನು ಹುಟ್ಟಿಸಿದ್ದ ಕಾರಣದಿಂದ ಅವರು ಯುದ್ಧದಿಂದ ಹಿಂದೆಸರಿಯಲಿಲ್ಲ. ಯುದ್ಧ ಶುರುವಾದಾಗ, ಹಝ್ರತ್ ಪೈಗಂಬರ್(ಸ)ರ ಉತ್ತಮ ಕಾರ್ಯವೈಖರಿಯ ಪರಿಣಾಮವಾಗಿ ಬನೂ ಮುಸ್ತಲಖ್‌ರನ್ನು ಸುತ್ತುವರೆಯಲಾಯಿತು. ಅವರು ಆಯುಧಗಳನ್ನು ಕೆಳಗೆ ಹಾಕಲು ನಿರ್ಬಂಧಿತರಾದರು. ಈ ಯುದ್ಧದಲ್ಲಿ ಒಬ್ಬ ಮುಸ್ಲಿಮ್ ಮತ್ತು ಹತ್ತು ಮಂದಿ ಸತ್ಯನಿಷೇಧಿಗಳು ಕೊಲ್ಲಲ್ಪಟ್ಟರು.

ಬನೂ ಮುಸ್ತಲಖ್ ಯುದ್ಧದಿಂದ ಹಿಂದಿರುಗುವಾಗ ಮುಹಾಜಿರ್‌ಗಳಲ್ಲಿ ಒಬ್ಬ ವ್ಯಕ್ತಿ ಒಬ್ಬ ಅನ್ಸಾರಿಯ ಬೆನ್ನಿಗೆ ಹೊಡೆದರು. ಆಗ ಇಬ್ಬರೂ ವ್ಯಕ್ತಿಗಳು ತಮ್ಮ ತಮ್ಮ ಗುಂಪಿನವರನ್ನು ಸಹಾಯಕ್ಕಾಗಿ ಕರೆದರು. ಹಝ್ರತ್ ಪೈಗಂಬರ್(ಸ)ರಿಗೆ ಈ ಸುದ್ದಿ ತಲುಪಿದಾಗ ಹಝ್ರತ್ ಪೈಗಂಬರ್(ಸ) ಅದನ್ನು ವ್ಯರ್ಥ ಮತ್ತು ಕೊಳಕು ಸಂಗತಿಯೆಂದು ಹೇಳಿಕೊಂಡು ಸಮಸ್ಯೆಯನ್ನು ಕೊನೆಗೊಳಿಸಿದರು. ಆದರೆ ಅಬ್ದುಲ್ಲಾಹ್ ಬಿನ್ ಉಬಯ್ಯ್ ಹೇಳಿದನು: "ಮುಹಾಜಿರನಾದ ವ್ಯಕ್ತಿ ಅನ್ಸಾರ್‌ನವರ ಒಬ್ಬ ವ್ಯಕ್ತಿಯನ್ನು ಹೊಡೆದನು. ನಾವು ಮದೀನಕ್ಕೆ ತಲುಪಿದ ನಂತರ ಗೌರವಾನ್ವಿತನಾದ ವ್ಯಕ್ತಿ ನಿಂದ್ಯನಾದ (ನಊಧುಬಿಲ್ಲಾಹ್) ವ್ಯಕ್ತಿಯನ್ನು ಅಲ್ಲಿಂದ ಹೊರಗೆ ಹಾಕುವನು." ಇದನ್ನು ಆಲಿಸಿದಾಗ, ಅಬ್ದುಲ್ಲಾಹ್ ಬಿನ್ ಉಬಯನ್ನು ಕೊಲ್ಲಲು ಹಝ್ರತ್ ಉಮರ್(ರ) ಅನುಮತಿ ಕೇಳಿದರು. ಆದಾಗ್ಯೂ ಹಝ್ರತ್ ಪೈಗಂಬರ್(ಸ) ಅನುಮತಿ ಕೊಡಲಿಲ್ಲ. ಅನಂತರ ಅಬ್ದುಲ್ಲಾಹ್ ಬಿನ್ ಉಬಯ್‌ನ ಕಾಪಟ್ಯ ಮತ್ತು

ಇಸ್ಲಾಮಿನೊಂದಿಗೆ ಅವನಿಗೆ ಇದ್ದ ಶತ್ರುತ್ವ ಬಹಿರಂಗವಾದಾಗ, ಹಝ್ರತ್ ಉಮರ್(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಂದು ನಾನು ಆತನನ್ನು ಕೊಲ್ಲಿಸಿದ್ದರೆ, ಜನರು ಆಕ್ಷೇಪವೆತ್ತುತ್ತಿದ್ದರು. ಆದರೆ ಈಗ ಅವನ ಜನರಲ್ಲೇ ಯಾರೊಡನೆಯಾದರೂ ಅವನನ್ನು ಕೊಲ್ಲಲು ನಾನು ಆಜ್ಞಾಪಿಸಿದರೆ, ಅವರು ಅವನನ್ನು ಕೊಲ್ಲುವರು.

ಕಪಟವಿಶ್ವಾಸಿಗಳ ನೇತಾರನಾದ ಅಬ್ದುಲ್ಲಾಹ್ ಬಿನ್ ಉಬಯ್‌ನ ಜನಾಝವನ್ನು ನಿರ್ವಹಿಸಲು ಹಝ್ರತ್ ಪೈಗಂಬರ್(ಸ) ತಯಾರಾದಾಗ, ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು: ಕಪಟವಿಶ್ವಾಸಿಗಳ ಜನಾಝ ನಮಾಝನ್ನು ನಿರ್ವಹಿಸುವುದರಿಂದ ಅಲ್ಲಾಹನು ನಿಮ್ಮನ್ನು ತಡೆದಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಪಶ್ಚಾತ್ತಾಪಕ್ಕಾಗಿ ಪ್ರಾರ್ಥಿಸಲು ಅಥವಾ ಪ್ರಾರ್ಥಿಸದಿರಲು ಅಲ್ಲಾಹನು ನನಗೆ ಅನುಮತಿ ನೀಡಿದ್ದಾನೆ. ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಅವನ ಜನಾಝ ನಮಾಝನ್ನು ನಿರ್ವಹಿಸಿದರು. ಆದರೆ ಅನಂತರ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ಪೂರ್ಣವಾಗಿ ತಡೆದಾಗ, ಕಪಟವಿಶ್ವಾಸಿಗಳ ಜನಾಝ ನಮಾಝ್ ನಿರ್ವಹಿಸುವುದನ್ನು ಹಝ್ರತ್ ಪೈಗಂಬರ್(ಸ) ಉಪೇಕ್ಷಿಸಿದರು.

ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ರಾಯಭಾರಿಯ ಕರ್ತವ್ಯವನ್ನು ನಿರ್ವಹಿಸಲಿಕ್ಕಾಗಿ ಹಝ್ರತ್ ಉಮರ್(ರ)ರನ್ನು ಖುರೈಶೀ ನೇತಾರರ ಬಳಿಗೆ ಕಳುಹಿಸಲು ಹಝ್ರತ್ ಪೈಗಂಬರ್(ಸ) ಉದ್ದೇಶಿಸಿದರು. ಆಗ ಹಝ್ರತ್ ಉಸ್ಮಾನ್(ರ)ರನ್ನು ಈ ಕಾರ್ಯಕ್ಕಾಗಿ ಕಳುಹಿಸುವುದು ಉತ್ತಮವೆಂದು ಹಝ್ರತ್ ಉಮರ್(ರ) ಸಲಹೆ ನೀಡುತ್ತಾ ಹೀಗೆ ಹೇಳಿದರು: "ಖುರೈಶಿಗಳ ದೃಷ್ಟಿಯಲ್ಲಿ ಅವರು ನನಗಿಂತ ಗೌರವಾನ್ವಿತರು." ಹೀಗೆ ಹಝ್ರತ್ ಉಮರ್(ರ)ರ ಸಲಹೆಯನ್ನು ಹಝ್ರತ್ ಪೈಗಂಬರ್(ಸ) ಅಂಗೀಕರಿಸಿದರು.

ಹುದೈಬಿಯಾ ಸಂಧಿಯ ಶರತ್ತುಗಳನ್ನು ಬರೆಯುತ್ತಿದ್ದಾಗ, ಮಕ್ಕದ ಖುರೈಶಿಗಳ ದೂತನಾದ ಸುಹೈಲ್‌ನ ಮಗನಾದ ಅಬೂಜಂದಲ್ ಅಲ್ಲಿಗೆ ತಲುಪಿದನು. ಅವನನ್ನು ಕೈಕೋಳ ಮತ್ತು ಸಂಕೋಲೆಯಿಂದ ಬಿಗಿಯಲಾಗಿತ್ತು. ಆ ಸಮಯದಲ್ಲಿ ಸುಹೈಲ್ ಹೀಗೆ ನಿಬಂಧನೆ ಬರೆಯುತ್ತಿದ್ದರು: ಮಕ್ಕದಿಂದ ಮುಸ್ಲಿಮರ ಕಡೆಗೆ ಬರುವ ಪ್ರತಿಯೊಬ್ಬ ವ್ಯಕ್ತಿಯನ್ನು ಮರಳಿ ಕಳುಹಿಸಬೇಕಾಗುವುದು. ಹಝ್ರತ್ ಪೈಗಂಬರ್(ಸ) ಸುಹೈಲ್‌ರೊಡನೆ ಹೇಳಿದರು: ಈಗ ಒಪ್ಪಂದ ಪೂರ್ತಿಯಾಗಿಲ್ಲ. ಆದರೆ ಸುಹೈಲ್ ಸಮ್ಮತಿಸಲಿಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: "ಸಭ್ಯತೆ ಮತ್ತು ಔದಾರ್ಯವೆಂಬ ರೀತಿಯಲ್ಲಾದರೂ ಅಬೂಜಂದಲ್‌ನನ್ನು ನಮಗೆ ಕೊಡಿರಿ." ಆದರೂ ಸುಹೈಲ್ ಅಂಗೀಕರಿಸಲಿಲ್ಲ. ಅಬೂಜಂದಲ್‌ರೊಡನೆ ಸಹನೆದೋರಲು ಉಪದೇಶಿಸುತ್ತಾ ಅಲ್ಲಾಹನ ಮೇಲೆ ಭರವಸೆ ಇರಿಸಲು ಹಝ್ರತ್ ಪೈಗಂಬರ್(ಸ) ಹೇಳಿದರು. ಈ ದೃಶ್ಯ ಮುಸ್ಲಿಮರಿಗೆ ಬಹಳ ದುಃಖವನ್ನು ಉಂಟುಮಾಡುವುದಾಗಿತ್ತು. ಕೊನೆಗೆ ಹಝ್ರತ್ ಉಮರ್(ರ)ರಿಂದ ಸಹಿಸಲು ಸಾಧ್ಯವಾಗಲಿಲ್ಲ. ಹಝ್ರತ್ ಉಮರ್(ರ) ನಡುಗುವ ಸ್ವರದಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು: ನೀವು ಅಲ್ಲಾಹನ ಸತ್ಯಸಂಧರಾದ ಪ್ರವಾದಿಯಲ್ಲವೇ? ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿ ಅಲ್ಲವೇ? ಹಾಗಾದರೆ, ನಾವು ಈ ನಿಂದತೆಯನ್ನು ಏಕೆ ಸಹಿಸಬೇಕು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ಅವನ ಇಚ್ಛೆಯನ್ನು ನಾನು ಬಲ್ಲೆನು. ಅವನ ಇಂಗಿತಕ್ಕೆ ವಿರುದ್ಧವಾಗಿ ನನಗೆ ಹೋಗಲು ಸಾಧ್ಯವಲ್ಲ. ಹಝ್ರತ್ ಉಮರ್(ರ)ರನ್ನು ಉಪದೇಶಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಉಮರ್, ಜಾಗರೂಕತೆಯಿಂದ ಇರು. ಹಝ್ರತ್ ಪೈಗಂಬರ್(ಸ)ರ ಪೀಠದಲ್ಲಿ ನೀನು ಇರಿಸಿರುವ ಕೈಯನ್ನು ಸಡಿಲಗೊಳಿಸಬೇಡ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮತುಲ್ಲಾಹ್) ತನ್ನ ಖಿಲಾಫತಿಗಿಂತ ಮುಂಚಿನ ಜಲ್ಸ ಸಾಲಾನದ ತನ್ನ ಭಾಷಣದಲ್ಲಿ ಹೇಳುತ್ತಾರೆ: ಹಝ್ರತ್ ಉಮರ್(ರ)ರ ಹೃದಯದಿಂದ ಸವಾಲಾಗಿ ಹೊರಟ ದುಃಖ ಮತ್ತು ಸಂಕಟದ ಆ ಅಳಲು, ಇತರ ಹಲವಾರು ಹೃದಯಗಳಲ್ಲಿ ಅದುಮಿ ಇತ್ತು. ಅದನ್ನು ಬಹಿರಂಗಪಡಿಸಲು ಹಝ್ರತ್ ಉಮರ್(ರ) ತೋರಿಸಿದ ಧೈರ್ಯದ ಕಾರಣದಿಂದ ಅವರು ಅನಂತರ ಜೀವನಪೂರ್ತಿ ಲಜ್ಜಿತರಾಗಿದ್ದರು. ಅನೇಕ ಉಪವಾಸಗಳನ್ನು ಇರಿಸಿದರು. ಬಹಳವಾಗಿ ಆರಾಧನೆ ನಡೆಸಿದರು. ಬಹಳಷ್ಟು ದಾನಧರ್ಮಗಳನ್ನು ನೀಡಿದರು ಮತ್ತು ಇಸ್ತಿಗ್‌ಫಾರ್ ಮಾಡಿದರು. ಅವರು ಹತಾಶೆಯಿಂದ ಯಾವಾಗಲೂ ಹೀಗೆ ಹೇಳುತ್ತಿದ್ದರು: ನಾನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಸವಾಲು ಕೇಳದಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಮುಸ್ಲಿಮರ ಮತ್ತು ಖುರೈಶಿಗಳ ನಡುವೆ ಮಾಡಲಾದ ಒಪ್ಪಂದದಲ್ಲಿ ಹಝ್ರತ್ ಉಮರ್(ರ) ಸಹ ಸಹಿ ಮಾಡಿದ್ದರು. ಹುದೈಬಿಯಾದಿಂದ ಮರಳಿ ಬರುವಾಗ ಸೂರತುಲ್ ಫತಹ್‌ನ ವಚನಗಳು ಅವತೀರ್ಣವಾದುವು. ಆಗ ಹಝ್ರತ್ ಉಮರ್(ರ)ರನ್ನು ಹಝ್ರತ್ ಪೈಗಂಬರ್(ಸ) ಕರೆದು ಹೀಗೆ ಹೇಳಿದರು: ಲೋಕದ ಎಲ್ಲ ವಸ್ತುಗಳಿಗಿಂತ ಹೆಚ್ಚು ಪ್ರಿಯವಾದ ಒಂದು ಸೂರತ್ ನನಗೆ ಅವತೀರ್ಣವಾಗಿದೆ. ಹಝ್ರತ್ ಉಮರ್(ರ) ಕೇಳಿದರು: ಈ ಒಪ್ಪಂದ ಯಥಾರ್ಥದಲ್ಲಿ ಇಸ್ಲಾಮಿನ ವಿಜಯವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ನಿಶ್ಚಯವಾಗಿಯೂ ಇದು ನಮ್ಮ ವಿಜಯವಾಗಿದೆ.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳುತ್ತಾ ಹುಝೂರ್ ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸಿಕೊಂಡು ಅವರ ಜನಾಝ ಗಾಇಬ್ ನಿರ್ವಹಿಸುವುದಾಗಿ ಹೇಳಿದರು:)

ಖಾದಿಯಾನಿನ ಬಶೀರ್ ಅಹ್ಮದ್ ಕಾಲಾ ಅಫ್‌ಘಾನ್ ದರ್ವೇಶರ ಮಗನಾದ ಸನ್ಮಾನ್ಯ ಶುಐಬ್ ಅಹ್ಮದ್ ಸಾಹಿಬ್ 56ನೇ ವಯಸ್ಸಿನಲ್ಲಿ ಅವರು ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಸದರ್ ಅಂಜುಮನ್ ಅಹ್ಮದಿಯಾದ ಹಲವು ವಿಭಾಗಗಳಲ್ಲಿ ಉದ್ಯೋಗಿಯಾಗಿ, ಆಫೀಸರ್ ಆಗಿ ಮತ್ತು ನಾಝಿರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇಂಚಾರ್ಜ್ ದಫ್ತರ್ ಉಲ್‌ಯ, ಇಂಚಾರ್ಜ್ ಜಲ್ಸ ಸಾಲಾನ, ನಾಝಿರ್ ಬೈತುಲ್ ಮಾಲ್ ಖರ್ಚ್, ನಾಝಿಂ ವಖ್ಫೇ ಜದೀದ್ ಮಾಲ್, ಅಫ್ಸರ್

ಜಲ್ಸ ಸಾಲಾನ ಮತ್ತು ಭಾರತದ ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಆರಾಧನೆಯ ಕಡೆಗೆ ಅವರಿಗೆ ಬಹಳ ಶ್ರದ್ಧೆ ಇತ್ತು. ತಹಜ್ಜುದ್ ಮತ್ತು ಐಚ್ಛಿಕ ನಮಾಝ್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಖಿಲಾಫತಿನ ಅನುಸರಣೆಯಲ್ಲೂ ಉನ್ನತ ಮಟ್ಟವನ್ನು ಇರಿಸಿದ್ದರು. ಪವಿತ್ರ ಖುರ್‌ಆನಿನ ಗಹನವಾದ ಅರಿವು ಇತ್ತು. ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಗ್ರಂಥಗಳನ್ನು ಬಹಳವಾಗಿ ಅಧ್ಯಯನ ಮಾಡುತ್ತಿದ್ದರು. ಬಹಳ ವಿಸ್ತಾರವಾದ ಧಾರ್ಮಿಕ ಜ್ಞಾನ ಹೊಂದಿದ್ದರು. ಬಹಳ ಹಸನ್ಮುಖಿ ಮತ್ತು ಸ್ನೇಹಮಯಿಯಾಗಿದ್ದರು. ಎಲ್ಲ ಮಟ್ಟದ ಜನರೊಂದಿಗೆ ಪ್ರೀತಿ ಮತ್ತು ಪ್ರೇಮದಿಂದ ವರ್ತಿಸುತ್ತಿದ್ದರು. ನಿರ್ಗತಿಕರ ಮತ್ತು ತಮ್ಮ ಅಧೀನದಲ್ಲಿ ಕೆಲಸ ಮಾಡುವವರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಖಾದಿಯಾನಿನ ಪ್ರತಿಯೊಬ್ಬರೂ ಅವರನ್ನು ಪ್ರಶಂಸಿಸುತ್ತಿದ್ದಾರೆ. ಧೈರ್ಯದಿಂದ ಇರುವವರೂ ಕೃತಜ್ಞತೆಯುಳ್ಳವರೂ ಆಗಿದ್ದರು. ದಿವಂಗತರು ಮೂಸಿಯಾಗಿದ್ದರು. ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಅಗಲಿರುವರು. ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ಸದರ್ ಆದ ಜಲಾಲುದ್ದೀನ್ ನಯ್ಯರ್ ಸಾಹಿಬ್‌ರ ಅಳಿಯನಾಗಿದ್ದರು. ಅಲ್ಲಾಹನು ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಪತ್ನಿಗೂ ಸಹನೆ ಮತ್ತು ಸಮಾಧಾನ ನೀಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಸನ್ಮಾನ್ಯ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್‌ರದ್ದಾಗಿದೆ. ಮೇ 18ರಂದು 52ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ದಿವಂಗತರು ಜಮ್ಮು ಕಾಶ್ಮೀರ ರಾಜ್ಯದ ರಾಜೋರಿ ಜಿಲ್ಲೆಯ ಚಾರ್‌ಕೋಟ್ ಜಮಾಅತಿನವರಾಗಿದ್ದರು. ಅವರ ಸೇವೆಯ ಕಾಲಾವಧಿ 30 ವರ್ಷಗಳಷ್ಟು ಆಗಿತ್ತು. ಅವರಿಗೆ ಲಕ್ನೌವಿನ ಝೋನಲ್ ಅಮೀರ್ ಆಗಿ ಮತ್ತು ಶ್ರೀನಗರದ ಮುಬಲ್ಲಿಗ್ ಇಂಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. 2017ರಿಂದ ನಿಧನದ ತನಕ ಫುಲ್‌ಟೈಮ್ ಮರ್ಕಝಿ ಖಾಝಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಖಝಾದಲ್ಲಿ ಕ್ರಿಯಾಶೀಲರಾಗಿ ಮತ್ತು ನಿಷ್ಠೆಯಿಂದ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಅನೇಕ ಮೊಕದ್ದಮೆಗಳ ತೀರ್ಪು ಮಾಡಿದ್ದರು. ತಮಗೆ ವಹಿಸಲಾದ ಕೆಲಸದ ಬಗ್ಗೆ ಅವರಿಗೆ ಬಹಳ ಚಿಂತೆ ಇರುತ್ತಿತ್ತು. ಕಳೆದ ಕೆಲವು ದಿನಗಳಿಂದ ಕೊರೋನ ರೋಗಪೀಡಿತರಾಗಿ ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆಯಲ್ಲೂ ಕೆಲಸಗಳ ಬಗ್ಗೆ ಅವರಿಗೆ ಚಿಂತೆಯಿತ್ತು. ಬಹಳ ಸ್ನೇಹಮಯಿ, ಧೈರ್ಯವಂತ, ಕ್ರೀಯಾಶೀಲ ವಖ್ಫೇ ಝಿಂದಗಿಯಾಗಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ತಾಯಿಯನ್ನು, ಮೂವರು ಸಹೋದರರನ್ನು ಅಲ್ಲದೆ ಪತ್ನಿ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪುತ್ರಿಯರನ್ನು ಸಂರಕ್ಷಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

(ಇವರಲ್ಲದೇ ಸನ್ಮಾನ್ಯ ಮಲಿಕ್ ಮುಹಮ್ಮದ್ ಯೂಸುಫ್ ಸಲೀಂ ಸಾಹಿಬ್, ಸನ್ಮಾನ್ಯ ಜಾವೇದ್ ಇಕ್ಬಾಲ್ ಸಾಹಿಬ್, ಸನ್ಮಾನ್ಯ ಮದೀಹ ನವಾಝ್ ಸಾಹಿಬ ಇವರ ಬಗ್ಗೆ ಸಹ ಪ್ರಸ್ತಾಪಿಸುತ್ತಾ ಅವರೆಲ್ಲರ ಮಗ್‌ಫಿರತ್ ಮತ್ತು ಉನ್ನತ ಪದವಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِیَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی

وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 04-06-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon